

ನಿಂತು ದೇಹದ ಒತ್ತಡ ನಿವಾರಿಸಿಕೊಂಡರು. ಆ ಪೈಕಿ ಒಬ್ಬಿಬ್ಬರು, ಚಕ್ರ ಬದಲಿಸುವ ಕೆಲಸಕ್ಕೆ ಕೈ ಹಚ್ಚಿದ ಸಿಬ್ಬಂದಿಗೆ ಮೊಬೈಲ್‌ನಿಂದ ಬೆಳಕು ಹರಿಸುವ ಸಹಾಯಕ್ಕೆ ಮುಂದಾದರು. ಮತ್ತೆ ಕೆಲವರು ನೆಟ್‌ವರ್ಕ್‌ಗಾಗಿ ಮೊಬೈಲನ್ನು ಮೇಲೆ ಕೆಳಕ್ಕೆ ಹಿಡಿಯುತ್ತ ಬಿಎಸ್‌ಎನ್‌ಎಲ್‌ಗಿಂತ ಇತರ ಮೊಬೈಲ್ ಕಂಪೆನಿಗಳು ಹೇಗೆ ಭಿನ್ನ ಎಂಬ ದಿಢೀರ್ ಚರ್ಚೆ ಶುರುವಿಟ್ಟುಕೊಂಡರು. ರಾತ್ರಿ ಹನ್ನೊಂದಕ್ಕೆ ಶಿವಮೊಗ್ಗದಿಂದ ಹೊರಡುವ ಬೆಂಗಳೂರು ರೈಲು ಹಿಡಿಯುವ ಭರವಸೆಯಲ್ಲಿ ರಿಸರ್ವ್ ಮಾಡಿಸಿದ್ದವರು, ಮುಂದೇನು ಎಂಬ ತಲೆಬಿಸಿಯಲ್ಲಿ ಚಿರಿಪಿರಿ ಮಾಡಿಕೊಂಡರು.

ದಾಂಡೇಲಿಯಿಂದ ಯಲ್ಲಾಪುರದವರೆಗೂ ರಸ್ತೆ ದುರಸ್ತಿ ಕಾರಣವಾಗಿ ಬಸ್ ವೇಗ ಕುಂಠಿತಗೊಂಡು ಪ್ರಯಾಣ ತಡವಾಗಿ ಹೂನಿದ್ರೆ ಹಾಳಾಗಲಿ, ತೂಕಡಿಕೆಯೂ ಬಾರದೆ ಎಚ್ಚರವಾಗಿದ್ದವರಿಗೆ ರೇಜಿಗೆ ಹುಟ್ಟಿಸಿದ್ದರ ಜೊತೆಗೆ ಟೈರ್ ಪಂಕ್ಚರ್ ಆಗಿ ಹೊಸ ಸಮಸ್ಯೆ ಎದುರಾಗಿತ್ತು.

ಇತರ ಎಲ್ಲರಂತೆ ಮಂಡೆ ಬಿಸಿ ಮಾಡಿಕೊಂಡಿದ್ದ ರೋಹಿತ್, ಹೊಟ್ಟೆಗೆ ಹಾಕಲು ಏನಾದರೂ ಸಿಕ್ಕೀತೆ ಎಂದು ವ್ಯರ್ಥ ಯೋಚಿಸಿದ. ಈ ಕಾಡಲ್ಲಿ ಏನು ಸಿಗುತ್ತದೆಂದು ತನ್ನಷ್ಟಕ್ಕೆ ಉದರ ವೈರಾಗ್ಯ ತಂದುಕೊಂಡು ಸಮಾಧಾನ ಮಾಡಿಕೊಳ್ಳಲು ಯತ್ನಿಸಿದ. ಮುಂದೆ ಸಿಗುವ ಮಂಚಿಕೇರಿ ನಂತರ ಉಮ್ಮಚಗಿ, ಅಲ್ಲೇನಾದರೂ ತಿನ್ನಲು ಸಿಕ್ಕಬಹುದೇ ಎಂಬ ಯೋಚನೆ ಬಂತು. ಆದರೆ, ಅಲ್ಲಿಗೆ ಹೋಗುವುದಾದರೂ ಹೇಗೆ? ಬೇರೆ ವಾಹನದ ಸದ್ದಿಲ್ಲ ಸುಳಿವಿಲ್ಲ. ಗೋಳನ್ನು ಸ್ವಗತ ಹೇಳಿಕೊಂಡ.